ಕಾಮಗಾರಿ ಇಲಾಖೆಯಲ್ಲಿ ೧೯೮೯ನೇ ಏಪ್ರಿಲ್‌ನಿಂದ ೧೯೮೯ನೇ ಅಕ್ಟೋಬರ್‌ವರೆಗೆ ಆಗಿರುವ ಸಹಾಯಕ ಎಕ್ಸಿಕ್ಯೂಟಿವ್ ಇಂಜಿನೀಯರ್, ಎಕ್ಸಿಕ್ಯೂಟಿವ್ ಇಂಜಿನೀಯರ್ ಹಾಗೂ ಇತರೆ ಮೇಲ್ಪಟ್ಟ ಅಧಿಕಾರಿಗಳ ವರ್ಗಾವಣೆ.

೧೯೮. ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ).—ಮಾನ್ಯ ಲೋಕೋಪಯೋಗಿ ಮತ್ತು ಕಾಡಾ, ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾಮಗಾರಿ ಇಲಾಖೆಯಲ್ಲಿ ೧೯೮೯ನೇ ಏಪ್ರಿಲ್‌ನಿಂದ ೧೯೮೯ನೇ ಅಕ್ಟೋಬರ್‌ವರೆಗೆ ಆಗಿರುವ ಸಹಾಯಕ ಎಕ್ಸಿಕ್ಯೂಟಿವ್ ಇಂಜಿನೀಯರ್, ಎಕ್ಸಿಕ್ಯೂಟಿವ್ ಇಂಜಿನೀಯರ್ ಹಾಗೂ ಇತರ ಮೇಲ್ಪಟ್ಟ ಅಧಿಕಾರಿಗಳ ವರ್ಗಾವಣೆಗಳು ಎಷ್ಟು ?

ಆ) ವರ್ಗಾವಣೆ ಮಾಡುವಾಗ ಅನುಸರಿಸಲಾದ ನಿಯಮಗಳು ಯಾವುವು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ಕಾಡಾ ಇಲಾಖಾ ಸಚಿವರು).—

ಅ) ೧೯೮೯ನೇ ಏಪ್ರಿಲ್‌ನಿಂದ ೧೯೮೯ನೇ ಅಕ್ಟೋಬರ್‌ವರೆಗೆ ಕಾಮಗಾರಿ ಇಲಾಖೆಯಲ್ಲಿ ಈ ಕೆಳಕಂಡಂತೆ ವರ್ಗಾವಣೆಗಳನ್ನು ಮಾಡಲಾಗಿದೆ :—

೧)	ಮುಖ್ಯ ಇಂಜಿನೀಯರ್	೦೨
೨)	ಸೂಪರಿಂಟೆಂಡಿಂಗ್ ಇಂಜಿನೀಯರ್	೦೧
೩)	ಎಕ್ಸಿಕ್ಯೂಟಿವ್ ಇಂಜಿನೀಯರ್	೦೫
೪)	ಸಹಾಯಕ ಎಕ್ಸಿಕ್ಯೂಟಿವ್ ಇಂಜಿನೀಯರ್	೧೪
	ಒಟ್ಟು	೨೨

ಆ) ಸರ್ಕಾರದ ಸುತ್ತೋಲೆ ಸಂಖ್ಯೆ : ಸಿಆಸಂಇ ೮ ಸೇನಾವ ೮೯ ದಿನಾಂಕ ೫–೫–೮೯ ಮತ್ತು ಅಧಿಕೃತ ಜ್ಞಾಪನ ಸಂಖ್ಯೆ : ಸಿಆಸುಇ ೭ ಸೇನಾವ ೮೯ ದಿನಾಂಕ ೧೫–೫–೮೯ರಲ್ಲಿಯ ವರ್ಗಾವಣೆ ನೀತಿಗಳನ್ನು ಅನುಸರಿಸಿ, ಸಾರ್ವಜನಿಕ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮೇಲ್ಕಾಣಿಸಿದ ವರ್ಗಾವಣೆಗಳನ್ನು ಮಾಡಲಾಗಿದೆ.

ಕೇಂದ್ರ ಸರ್ಕಾರವು ರಾಜ್ಯ ಸರಕಾರಕ್ಕೆ ನೀಡಿದ ಟಿ. ವಿ. ಗಳ ಬಗ್ಗೆ

೨೩೧. ಶ್ರೀಮತಿ ಸುಮಾ ವಸಂತ (ವಿರಾಜಪೇಟೆ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಯೋಜನಾ ವಾರ್ತಾ ಪ್ರಸಾರೋದ್ಯಮ ಮತ್ತು ಯುವಜನ ಸೇವೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಗ್ರಾಮೀಣ ಜನರ ಉಪಯೋಗಕ್ಕಾಗಿ ಹಾಗೂ ಸಮುದಾಯ ಉದ್ದೇಶಕ್ಕಾಗಿ ಟಿ. ವಿ. ಗಳನ್ನು ಏನಾದರೂ ನೀಡಿದೆಯೇ ?

ಆ) ಹಾಗಿದ್ದಲ್ಲಿ ನೀಡಿರುವ ಟಿ.ವಿ.ಗಳ ಸಂಖ್ಯೆಯೆಷ್ಟು? (ವರ್ಷವಾರು ಮಾಹಿತಿ ನೀಡುವುದು)

ಇ) ಈ ರೀತಿ ನೀಡಿರುವ ಟಿ. ವಿ.ಗಳನ್ನು ಯಾವ ಯಾವ ಜಿಲ್ಲೆಗಳಿಗೆ ಒದಗಿಸಲಾಗಿದೆ ಹಾಗೂ ಅವುಗಳು ಈಗ ಕಾರ್ಯ ನಿರ್ವಹಿಸುತ್ತಿವೆಯೇ: (ಜಿಲ್ಲಾವಾರು ಮಾಹಿತಿ ನೀಡುವುದು) ಇಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಯೋಜನಾ ವಾರ್ತಾ, ಪ್ರಸಾರೋದ್ಯಮ ಮತ್ತು ಯುವಜನ ಸೇವೆಗಳ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.